# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮ ನಿರ್ದೇಶನ ಹೊಂದಿದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 90 |
| ಉತ್ತರಿಸುವ ಸಚಿವರು | : | ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 13.02.2024 |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಸರ್ಕಾರಿ ಮತ್ತು ಖಾಸಗಿ ಒಡೆತನದಲ್ಲಿರುವ ಜವಳಿ ಪಾರ್ಕ್‌ಗಳೆಷ್ಟು; ಪೂರ್ಣ ಮಾಹಿತಿ ನೀಡುವುದು; | ರಾಜ್ಯದಲ್ಲಿ ಸರ್ಕಾರಿ ಒಡೆತನದಲ್ಲಿ 01 ಜವಳಿ ಪಾರ್ಕ್‌ನ್ನು ಅಭಿವೃದ್ಧಿಪಡಿಸಲಾಗುತ್ತಿದೆ ಹಾಗೂ ಖಾಸಗಿ ಒಡೆತನದಲ್ಲಿ ಒಟ್ಟು 06 ಜವಳಿ ಪಾರ್ಕ್‌ಗಳು ಕಾರ್ಯನಿರ್ವಹಿಸುತ್ತಿವೆ. ಪೂರ್ಣ ಮಾಹಿತಿಯನ್ನು **ಅನುಬಂಧ-1** ರಲ್ಲಿ ಒದಗಿಸಿದೆ. |
| (ಆ) | ರಾಜ್ಯದಲ್ಲಿ ಜವಳಿ ಪಾರ್ಕ್‌ಗಳ ಸ್ಥಾಪನೆಗೆ ತಗಲಿರುವ ವೆಚ್ಚವೆಷ್ಟು ಹಾಗೂ ಕೇಂದ್ರ-ರಾಜ್ಯ ಸರ್ಕಾರಗಳಿಂದ ಈ ಜವಳಿ ಪಾರ್ಕ್‌ಗಳ ಸ್ಥಾಪನೆಗೆ ವಿವಿಧ ರೂಪದಲ್ಲಿ ದೊರೆತಿರುವ ನೆರವು ಎಷ್ಟು; (ವರ್ಷವಾರು, ಕಾರ್ಯಕ್ರಮ ಮತ್ತು ಯೋಜನಾವಾರು ಪೂರ್ಣ ಮಾಹಿತಿ ನೀಡುವುದು) | **ಅನುಬಂಧ-2** ರಲ್ಲಿ ಒದಗಿಸಿದೆ. |
| (ಇ) | ರಾಜ್ಯದಲ್ಲಿ ಜವಳಿ ಪಾರ್ಕ್‌ಗಳ ಸ್ಥಾಪನೆಯಿಂದ ಸೃಜನೆಗೊಂಡಿರುವ ಉದ್ಯೋಗಗಳೆಷ್ಟು; (ಜಿಲ್ಲಾವಾರು ಮತ್ತು ವರ್ಷವಾರು ಪೂರ್ಣ ಮಾಹಿತಿ ನೀಡುವುದು) | **ಅನುಬಂಧ-2** ರಲ್ಲಿ ಒದಗಿಸಿದೆ. |
| (ಈ) | ರಾಜ್ಯದಲ್ಲಿ ಕೈಮಗ್ಗ ಮತ್ತು ಜವಳಿ ಕ್ಷೇತ್ರಗಳಲ್ಲಿ ಅತ್ಯಧಿಕ ಸಂಖ್ಯೆಯಲ್ಲಿ ನೇಕಾರರು ಇದ್ದು, ಈ ಜನರಿಗೆ ವಿಶೇಷ ತರಬೇತಿ ನೀಡಿ, ಜವಳಿ ಪಾರ್ಕ್‌ಗಳನ್ನು ಸ್ಥಾಪಿಸಲು ಅಥವಾ ಉದ್ಯೋಗ ದೊರಕಿಸಿಕೊಳ್ಳಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಆಯೋಜಿಸಿರುವ ಯೋಜನೆಗಳು ಯಾವುವು; ಮತ್ತು ಈ ಯೋಜನೆಗಳ ಅಡಿಯಲ್ಲಿ ಇದುವರೆಗೂ ನೀಡಿರುವ ವಿವಿಧ ತರಬೇತಿಗಳು ಯಾವುವು? (ಪೂರ್ಣ ಮಾಹಿತಿ ನೀಡುವುದು) | ರಾಜ್ಯದಲ್ಲಿ ಜವಳಿ ಆಧಾರಿತ ಚಟುವಟಿಕೆಗಳನ್ನು ಉತ್ತೇಜಿಸಲು ರಾಜ್ಯ ಸರ್ಕಾರವು ದಿನಾಂಕ:04.11.2019 ರಂದು "ನೂತನ ಜವಳಿ ಮತ್ತು ಸಿದ್ಧ ಉಡುಪು ನೀತಿ 2019-24" ನ್ನು ಜಾರಿಗೆ ತಂದಿರುತ್ತದೆ. ಸದರಿ ನೀತಿಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಹಾಗೂ ಉದ್ಯಮಿ ಸ್ನೇಹಿಯನ್ನಾಗಿಸಲು ಸರ್ಕಾರವು ಸದರಿ ನೀತಿಯಲ್ಲಿ ದಿನಾಂಕ:02.08.2022 ರಂದು ತಿದ್ದುಪಡಿ ಗಳನ್ನು ಮಾಡಿ ಜಾರಿಗೆ ತಂದಿದೆ.<br><br>ನೂತನ ಜವಳಿ ಮತ್ತು ಸಿದ್ಧ ಉಡುಪು ನೀತಿ 2019-24 ರಡಿ 45 ದಿನಗಳ ಅವಧಿಗೆ ಸೀವಿಂಗ್ ಮಷಿನ್ ಆಪರೇಟರ್ / ವಿದ್ಯುತ್‌ಮಗ್ಗ/ ಕೈಮಗ್ಗ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮಗಳನ್ನು ನೀಡಲು ಅವಕಾಶವಿರುತ್ತದೆ. ಕೌಶಲ್ಯ ಅಭಿವೃದ್ಧಿ ಕೇಂದ್ರಗಳಿಗೆ ರೂ.9,500/- ಗಳು ಮತ್ತು ಖಾಸಗಿ ಕೇಂದ್ರಗಳಿಗೆ ರೂ.11,000/- ಗಳಂತೆ ತರಬೇತಿ ವೆಚ್ಚದ ನೆರವನ್ನು ಈ ಕೆಳಕಂಡಂತೆ ನೀಡಲಾಗುವುದು.<br><br>• ಪ್ರತಿ ಫಲಾನುಭವಿಯ ಶಿಷ್ಯವೇತನ-ರೂ.3,500/-<br>• ಕಚ್ಚಾ ವಸ್ತುಗಳ ವೆಚ್ಚ - ರೂ.1,000/-<br>• ಸಂಸ್ಥೆಯ ಶುಲ್ಕದ ನೆರವು - ಕೌಶಲ್ಯ ಅಭಿವೃದ್ಧಿ ಕೇಂದ್ರಗಳಿಗೆ ರೂ.5,000/- ಮತ್ತು ಖಾಸಗಿ ತರಬೇತಿ ಕೇಂದ್ರಗಳಿಗೆ ರೂ.6,500/-<br><br>**ನೇಕಾರರ ಉದ್ಯೋಗ ದೊರಕಿಸಿಕೊಳ್ಳಲು ಕೇಂದ್ರ ಹಾಗೂ ರಾಜ್ಯ ಸರ್ಕಾರ ಈ ಕೆಳಕಂಡ ಯೋಜನೆಗಳನ್ನು ರೂಪಿಸಲಾಗಿದೆ.**<br><br>**ಕೇಂದ್ರ ಸರ್ಕಾರದ ಯೋಜನೆಗಳು**<br>• ನೇಕಾರರ ಸೇವಾ ಕೇಂದ್ರ ಬೆಂಗಳೂರು ಇವರ ಮೂಲಕ ಸಮರ್ಥ್ ಯೋಜನೆಯಡಿ ಕೈಮಗ್ಗ ನೇಕಾರರಿಗೆ 45 ದಿನಗಳ ತರಬೇತಿ ಕಾರ್ಯಕ್ರಮ |

| | | |
|---|---|---|
| | | **ರಾಜ್ಯ ಸರ್ಕಾರದ ಯೋಜನೆಗಳು**<br>• ಸಹಕಾರ ಬ್ಯಾಂಕ್‌ಗಳು ನೀಡಿದ ಶೂನ್ಯ, 1% ಮತ್ತು 3% ಸಾಲದ ಮೇಲೆ ಬಡ್ಡಿ ಸಹಾಯಧನ ಹಾಗೂ ಶೇ.8 ರ ಬಡ್ಡಿ ಸಹಾಯಧನ<br>• ನಬಾರ್ಡ್ ಪುನರ್ಧನ ಯೋಜನೆಯಡಿ ಬಡ್ಡಿ ಸಹಾಯಧನ<br>• ಕೈಮಗ್ಗ ವಿಕಾಸ ಯೋಜನೆ – ಕೈಮಗ್ಗ ಮತ್ತು ಅಗತ್ಯ ಸಲಕರಣೆಗಳನ್ನು ಖರೀದಿಸಲು ಘಟಕದ ವೆಚ್ಚ ಶೇ.50 ರಷ್ಟು ಸಹಾಯಧನ ಒದಗಿಸುವುದು.<br>• ಕೈಮಗ್ಗಗಳಿಗೆ ಮೋಟರೈಸ್ಡ್ ಜಕಾರ್ಡ್ ಸಲಕರಣೆಗಳ ಕಿಟ್ ಒದಗಿಸುವುದು.<br>• ಕಚ್ಚಾ ಮಾಲು ಖರೀದಿ ಮೇಲೆ ಕೈಮಗ್ಗ ಸಹಕಾರ ಸಂಘಗಳಿಗೆ ಪ್ರತಿ ಕೆ.ಜಿ ಗೆ ರೂ.15/– ರ ಸಹಾಯಧನ ನೀಡುವುದು.<br>• ಮೃತ ನೇಕಾರರ(ಕೈಮಗ್ಗ) ಅಂತ್ಯ ಸಂಸ್ಕಾರ ವೆಚ್ಚ ಮರುಪಾವತಿ<br>• ಕೈಮಗ್ಗ ಉತ್ಪನ್ನಗಳ ಮಾರಾಟ ಮೇಲೆ ವರ್ಷ ಪೂರ್ತಿ ಶೇ.20 ರಿಬೇಟ್ ಯೋಜನೆ<br>• ಸಾಮಾನ್ಯ ಸೌಲಭ್ಯ ಕೇಂದ್ರ ನಿರ್ಮಾಣ<br>• ಮಿತವ್ಯಯ ನಿಧಿ ಯೋಜನೆ<br>• ರಾಜ್ಯದ ಸಹಕಾರಿ ಮತ್ತು ವಾಣಿಜ್ಯ ಬ್ಯಾಂಕ್‌ಗಳಿಂದ ನೇಕಾರರಿಗೆ ನೀಡಲಾಗುವ ಸಾಲಕ್ಕೆ ಗರಿಷ್ಠ 8% ರಷ್ಟು ಬಡ್ಡಿ ಸಹಾಯಧನ<br>• ಕೈಮಗ್ಗ ನೇಕಾರ ಸಹಕಾರ ಸಂಘಗಳಿಗೆ ಒಂದಾವರ್ತಿ ಪ್ರೋತ್ಸಾಹಧನ<br>• ನೇಕಾರರ ಪ್ಯಾಕೇಜ್ ಯೋಜನೆಯಡಿ ಜವಳಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಸಾಮಾನ್ಯ ವರ್ಗದ ಫಲಾನುಭವಿಗಳಿಂದ ಸ್ಥಾಪಿಸಲಾಗುವ ಅತಿ ಸಣ್ಣ (ಎಂ.ಇ) ಘಟಕಗಳಿಗೆ ಸಹಾಯಧನ.<br>• 02 ವಿದ್ಯುತ್ ಮಗ್ಗ ಖರೀದಿಗೆ ಸಹಾಯಧನ<br>• ಎಲೆಕ್ಟ್ರಾನಿಕ್ ಜಕಾರ್ಡ್<br>• ಕೈಮಗ್ಗ ಮತ್ತು ಸಲಕರಣೆಗಳ ಖರೀದಿಗೆ ಸಹಾಯಧನ<br>• ವಿದ್ಯುತ್ ರಿಯಾಯಿತಿ ಸಹಾಯಧನ<br>• ನೇಕಾರರ ಪ್ಯಾಕೇಜ್ ಯೋಜನೆ – ವಿಶೇಷ ಘಟಕ / ಗಿರಿಜನ ಉಪ ಯೋಜನೆಯಡಿ ಜವಳಿ ಕ್ಷೇತ್ರಕ್ಕೆ ಸಂಬಂಧಿಸಿದ ಸಣ್ಣ ಮತ್ತು ಅತಿ ಸಣ್ಣ (ಎಸ್.ಎಂ.ಇ) ಘಟಕ ಸ್ಥಾಪನೆಗೆ ಸಹಾಯಧನ.<br>• 150 ಹೆಚ್.ಪಿ. ವರೆಗಿನ ಹೆಚ್.ಟಿ. ವಿದ್ಯುತ್ ಸಂಪರ್ಕ ಹೊಂದಿರುವ ಘಟಕಗಳಿಗೆ ಶೇ.50 ರಷ್ಟು ವಿದ್ಯುತ್ ಸಹಾಯಧನ ಒದಗಿಸುವುದು.<br>• ಮಿನಿ ಪವರ್‌ಲೂಮ್ ಪಾರ್ಕ್<br>• ಸೈಜಿಂಗ್ ಘಟಕ ಸ್ಥಾಪನೆ<br>• ಪ್ರೊಸೆಸ್ಸಿಂಗ್ ಘಟಕ ಸ್ಥಾಪನೆ<br>• ಉಣ್ಣೆ ವಲಯ ಅಭಿವೃದ್ಧಿ |

**ಸಂಖ್ಯೆ:CI 24 JAKE 2024**

(ಶಿವಾನಂದ ಎಸ್. ಪಾಟೀಲ)
**ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು**

# ಅನುಬಂಧ-1

1. **ಶಿಗ್ಗಾಂವಿ ಜವಳಿ ಪಾರ್ಕ್, ಶಿಗ್ಗಾಂವಿ, ಹಾವೇರಿ ಜಿಲ್ಲೆ (ಸರ್ಕಾರದ ಒಡೆತನ):**

2020-21 ನೇ ಸಾಲಿನಲ್ಲಿ ಹಾವೇರಿ ಜಿಲ್ಲೆಯ ಶಿಗ್ಗಾಂವಿ ತಾಲ್ಲೂಕಿನಲ್ಲಿ ಖುರ್ಸಾಪುರ ಗ್ರಾಮದ ಸರ್ವೆ ನಂ.43 ರಲ್ಲಿ 58 ಎಕರೆ 31 ಗುಂಟೆ ವಿಸ್ತೀರ್ಣದಲ್ಲಿ ರಾಜ್ಯದಲ್ಲಿ ಮೊದಲ ಬಾರಿಗೆ Anchor ಮಾದರಿಯಲ್ಲಿ ಜವಳಿ ಪಾರ್ಕ್‌ನ್ನು ಅಭಿವೃದ್ಧಿಪಡಿಸಲಾಗುತ್ತಿದೆ.

**ಖಾಸಗಿ ಒಡೆತನದಲ್ಲಿ ಒಟ್ಟು 06 ಜವಳಿ ಪಾರ್ಕ್‌ಗಳ ವಿವರ:-**

1. **ದೊಡ್ಡಬಳ್ಳಾಪುರ ಇಂಟಿಗ್ರೇಟೆಡ್ ಟೆಕ್ಸ್‌ಟೈಲ್ ಪಾರ್ಕ್, ದೊಡ್ಡಬಳ್ಳಾಪುರ:-(Scheme for Integrated Textile parks)**

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 2006-07 ನೇ ಸಾಲಿನಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಸಹಯೋಗದೊಂದಿಗೆ ದೊಡ್ಡಬಳ್ಳಾಪುರ ಕೈಗಾರಿಕಾ ಪ್ರದೇಶದಲ್ಲಿ ಒಟ್ಟು 46.5 ಎಕರೆ ವಿಸ್ತೀರ್ಣದಲ್ಲಿ ದೊಡ್ಡಬಳ್ಳಾಪುರ ಇಂಟಿಗ್ರೇಟೆಡ್ ಟೆಕ್ಸ್‌ಟೈಲ್ ಪಾರ್ಕ್ ನ್ನು ಎಸ್.ಪಿ.ವಿ ಮೂಲಕ 2006 ರಲ್ಲಿ ಒಟ್ಟು ರೂ.3678.90 ಲಕ್ಷಗಳ ಯೋಜನಾ ವೆಚ್ಚದಲ್ಲಿ ಪಾರ್ಕನ್ನು ಸ್ಥಾಪಿಸಲಾಗಿರುತ್ತದೆ. ಪ್ರಸ್ತುತ ಪಾರ್ಕ್ ನಲ್ಲಿ 14 ಜವಳಿ ಘಟಕಗಳು ಕಾರ್ಯ ನಿರ್ವಹಿಸುತ್ತಿದ್ದು, ಸುಮಾರು 200 ಜನರಿಗೆ ಉದ್ಯೋಗವನ್ನು ನೀಡಿರುತ್ತಾರೆ.

2. **ಮೆ|| ಬೈನರಿ ಅಪೆರೆಲ್ ಪಾರ್ಕ್ ಪ್ರೈ. ಲಿ., ಹಿರಿಯೂರು, ಚಿತ್ರದುರ್ಗ ಜಿಲ್ಲೆ.:-**

ನೂತನ ಜವಳಿ ನೀತಿ 2013-18 ರಡಿ ಚಿತ್ರದುರ್ಗ ಜಿಲ್ಲೆಯ, ಹಿರಿಯೂರು ತಾಲ್ಲೂಕಿನ ಬಗ್ಗನಾಡು ಗ್ರಾಮದಲ್ಲಿ 25.17 ಎಕರೆ ಪರಿವರ್ತಿತ ಜಮೀನಿನಲ್ಲಿ ಮೆ|| ಬೈನರಿ ಅಪೆರೆಲ್ ಪಾರ್ಕ್ ಪ್ರೈ. ಲಿ., ಹಿರಿಯೂರು ಈ ಕಂಪನಿಯ ವತಿಯಿಂದ ಅಪೆರೆಲ್ ಪಾರ್ಕ್ ಸ್ಥಾಪಿಸಲಾಗಿದೆ. ಪ್ರಸ್ತುತ ಪಾರ್ಕ್ ನಲ್ಲಿ 03 ಸಿದ್ಧ ಉಡುಪು ಘಟಕಗಳು ಕಾರ್ಯ ನಿರ್ವಹಿಸುತ್ತಿದ್ದು, ಒಟ್ಟು 3000 ಜನರಿಗೆ ಉದ್ಯೋಗವನ್ನು ನೀಡಿರುತ್ತಾರೆ.

3. **ದಾವಣಗೆರೆ ಟೆಕ್ಸ್ ಟೈಲ್ ಪಾರ್ಕ್ :**

2014-15 ನೇ ಸಾಲಿನಲ್ಲಿ ದಾವಣಗೆರೆಯ ಕರೂರು ಕೈಗಾರಿಕಾ ಪ್ರದೇಶದಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ವತಿಯಿಂದ 59-00 ಎಕರೆ ಪ್ರದೇಶದಲ್ಲಿ 71 ನಿವೇಶನಗಳನ್ನು ಅಭಿವೃದ್ಧಿಪಡಿಸಲಾಗಿರುವ ಜವಳಿ ಪಾರ್ಕ್‌ನಲ್ಲಿ 24 (ಸಿದ್ಧ ಉಡುಪು, ವೀವಿಂಗ್, ಪ್ರಿಂಟಿಂಗ್, ಟೆಕ್ ನಿಕಲ್ ಟೆಕ್ಸ್‌ಟೈಲ್ & ವಾಷಿಂಗ್) ಘಟಕಗಳು ಕಾರ್ಯನಿರ್ವಹಿಸುತ್ತಿದ್ದು, 1296 ಜನರಿಗೆ ಉದ್ಯೋಗವಕಾಶವನ್ನು ಒದಗಿಸಲಾಗಿರುತ್ತದೆ.

4. **ಕೆ.ಎಸ್.ಎಸ್.ಐ.ಡಿ.ಸಿ ಟೆಕ್ಸ್‌ಟೈಲ್ ಪಾರ್ಕ್, ಬೋರಗಾಂವ, ತಾ: ನಿಪ್ಪಾಣಿ, ಜಿ: ಬೆಳಗಾವಿ.**

ಸದರಿ ಪಾರ್ಕ್‌ನ್ನು 2012-13 ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ ಇವರ ವತಿಯಿಂದ ಬೋರಗಾಂವ್‌ನಲ್ಲಿ 75 ಎಕರೆ ವಿಸ್ತೀರ್ಣದಲ್ಲಿ ಸ್ಥಾಪಿಸಲಾಗಿರುತ್ತದೆ. ಒಟ್ಟು 217 ಕೈಗಾರಿಕಾ ನಿವೇಶನಗಳನ್ನು ಹಾಗೂ ಎಸ್.ಸಿ.ಪಿ/ಟಿ.ಎಸ್.ಪಿ ಯೋಜನೆಯಡಿ 15 ಮಳಿಗೆಗಳನ್ನು ರಚಿಸಲಾಗಿರುತ್ತದೆ. ಈ ಪೈಕಿ ಒಟ್ಟು 217 ಕೈಗಾರಿಕಾ ನಿವೇಶನಗಳನ್ನು 12 ಮಳಿಗೆಗಳನ್ನು ಹಂಚಿಕೆ ಮಾಡಲಾಗಿದ್ದು, 03 ಮಳಿಗೆಗಳನ್ನು ಹಂಚಿಕೆ ಮಾಡುವುದು ಬಾಕಿ ಇರುತ್ತದೆ. ಮೂಲಭೂತ ಸೌಲಭ್ಯಗಳಾದ ರಸ್ತೆ, ವಿದ್ಯುತ್ ಸಂಪರ್ಕ, ನೀರು ಸರಬರಾಜು ಮತ್ತು ಬೀದಿ ದೀಪಗಳನ್ನು ಒದಗಿಸಲಾಗಿರುತ್ತದೆ.

ಸದರಿ ಪಾರ್ಕ್ ನಲ್ಲಿ ಇಲಾಖೆಯ ನೇಕಾರರ ವಿಶೇಷ ಪ್ಯಾಕೇಜ್ ಯೋಜನೆಯ ವಿಶೇಷ ಘಟಕ / ಗಿರಿಜನ ಉಪ ಯೋಜನೆಯಡಿ 45 ಸಣ್ಣ ಮತ್ತು ಅತೀ ಸಣ್ಣ ಜವಳಿ ಘಟಕ ಸ್ಥಾಪಿಸಲು ಪ್ರಸ್ತಾವನೆಯ ಸ್ವೀಕೃತವಾಗಿದ್ದು, ಈ ಪೈಕಿ 27 ಘಟಕಗಳಿಗೆ ಅನುಮೋದನೆ ದೊರೆತಿದ್ದು,

...2

ಅನುಷ್ಠಾನ ಪ್ರಗತಿಯಲ್ಲಿದೆ. ಈ ಪೈಕಿ 15 ಘಟಕಗಳು ಕಾರ್ಯಾರಂಭ ಮಾಡಿರುತ್ತದೆ ಹಾಗೂ 12 ಘಟಕಗಳ ಅನುಷ್ಠಾನದ ಪ್ರಗತಿಯು ವಿವಿಧ ಹಂತದಲ್ಲಿರುತ್ತದೆ. ಸದರಿ ಪಾರ್ಕ್ ನಲ್ಲಿ ಒಟ್ಟು 351 ಜನರಿಗೆ ಉದ್ಯೋಗವನ್ನು ನೀಡಿರುತ್ತಾರೆ.

5. **ಕುರಣೆ ಟೆಕ್ಸ್ ಟೈಲ್ ಪಾರ್ಕ್ ಪ್ರೈ. ಲಿ., ಬುಗಟೆ ಆಲೂರು, ತಾ: ಹುಕ್ಕೇರಿ, ಜಿ: ಬೆಳಗಾವಿ**

ಸದರಿ ಪಾರ್ಕನ್ನು 2017-18ನೇ ಸಾಲಿನ ನೂತನ ಜವಳಿ ನೀತಿ ಯೋಜನೆಯ ಗ್ರೀನ್ ಫೀಲ್ಡ್ ಟೆಕ್ಸ್‌ಟೈಲ್ ಪಾರ್ಕ್ ಯೋಜನೆಯಡಿ ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಬುಗಟೆ ಆಲೂರು ಗ್ರಾಮದ ಸರ್ವೆ ನಂ.344 ರಲ್ಲಿ 18.16 ಎಕರೆ ಪ್ರದೇಶದಲ್ಲಿ ಅಭಿವೃದ್ಧಿ ಪಡಿಸಲಾಗುತ್ತಿದ್ದು, 92 ವಿವಿಧ ಅಳತೆಯ ನಿವೇಶನಗಳನ್ನು ರಚಿಸಲಾಗಿದೆ. ಈ ಪೈಕಿ 53 ನಿವೇಶನಗಳನ್ನು 15 ಉದ್ದಿಮೆದಾರರಿಗೆ ಹಂಚಿಕೆ ಮಾಡಲಾಗಿದೆ. ರಸ್ತೆ ಕಾಮಗಾರಿ ಶೇ.60 ರಷ್ಟು ಪೂರ್ಣಗೊಂಡಿದ್ದು, ಡಾಂಬರೀಕರಣ ಬಾಕಿ ಇರುತ್ತದೆ. ವಿದ್ಯುದ್ದೀಕರಣ ಕಾಮಗಾರಿ ಶೇ.100 ರಷ್ಟು ಪೂರ್ಣಗೊಂಡಿರುತ್ತದೆ. ಒಳ ಚರಂಡಿ ಕಾಮಗಾರಿ ಶೇ.90 ರಷ್ಟು ಪೂರ್ಣಗೊಂಡಿರುತ್ತದೆ. 5 ಲಕ್ಷ ಲೀಟರ್ ನೀರಿನ ಓವರ್ ಹೆಡ್ ಟ್ಯಾಂಕ್ ಕಾಮಗಾರಿ ಪೂರ್ಣಗೊಂಡಿರುತ್ತದೆ. ಆಂತರಿಕ ನೀರು ಸರಬರಾಜು ಕಾಮಗಾರಿ ಶೇ.100 ರಷ್ಟು ಪೂರ್ಣಗೊಂಡಿರುತ್ತದೆ.

ಪ್ರಸ್ತುತ ಪಾರ್ಕ್ ನಲ್ಲಿ 02 ವಿವೀಂಗ್ ಘಟಕಗಳು ಕಾರ್ಯ ನಿರ್ವಹಿಸುತ್ತಿದ್ದು, ಒಟ್ಟು 80 ಜನರಿಗೆ ಉದ್ಯೋಗವನ್ನು ನೀಡಿರುತ್ತಾರೆ.

6. **ಬಳ್ಳಾರಿ ಟೆಕ್ಸ್‌ಟೈಲ್ ಪಾರ್ಕ್ (ಕೆ.ಐ.ಎ.ಡಿ.ಬಿ ಯಿಂದ ಅಭಿವೃದ್ಧಿಪಡಿಸಲಾದ):-**

2017-18 ನೇ ಸಾಲಿನಲ್ಲಿ ಬಳ್ಳಾರಿಯ ಜೀನ್ಸ್ ಉಡುಪು ಘಟಕಗಳನ್ನು ಅಭಿವೃದ್ಧಿ ಪಡಿಸಲು, ಗುಣಮಟ್ಟ ಕಾಯ್ದುಕೊಳ್ಳಲು ಹಾಗೂ ವಾಯುಮಾಲಿನ್ಯ ನಿಯಂತ್ರಿಸಲು ಬಳ್ಳಾರಿ ಜವಳಿ ಪಾರ್ಕ್ ಎಂದು ಬಳ್ಳಾರಿಯ, ಮುಂಡರಗಿ ಕೈಗಾರಿಕಾ ವಸಾಹತು, 4ನೇ ಹಂತದಲ್ಲಿ 64.26 ಎಕರೆಯಲ್ಲಿ 83 ನಿವೇಶನಗಳನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಇವರಿಂದ ಅಭಿವೃದ್ಧಿ ಪಡಿಸಲಾಗಿರುತ್ತದೆ. ಪ್ರಸ್ತುತ ಪಾರ್ಕ್ ನಲ್ಲಿ 67 ಜೀನ್ಸ್ ವಾಷಿಂಗ್ ಘಟಕಗಳು ಕಾರ್ಯ ನಿರ್ವಹಿಸುತ್ತಿದ್ದು, ಒಟ್ಟು 1550 ಜನರಿಗೆ ಉದ್ಯೋಗವನ್ನು ನೀಡಿರುತ್ತಾರೆ.

ಜಂಟಿ ನಿರ್ದೇಶಕರು (ಜವಳಿ ನೀತಿ)
ಕೈಮಗ್ಗ ಮತ್ತು ಜವಳಿ

5. **ಬೋರಗಾಂವ್ ಟೆಕ್ಸ್‌ಟೈಲ್ ಪಾರ್ಕ್ (ಕೆ.ಎಸ್.ಎಸ್.ಐ.ಡಿ.ಸಿ ಅಭಿವೃದ್ಧಿಪಡಿಸಲಾದ)**

| | |
|---|---|
| ಸ್ಥಳ | ಬೋರಗಾಂವ್, ಚಿಕ್ಕೋಡಿ ತಾ|| ಬೆಳಗಾವಿ ಜಿಲ್ಲೆ |
| ಎಸ್.ಪಿ.ವಿ | ಇಲ್ಲ |
| ಭೂ ಪ್ರದೇಶ | 75 ಎಕರೆ |
| ಚಟುವಟಿಕೆ | ವೀವಿಂಗ್ & ಗಾರ್ಮೆಂಟಿಂಗ್ |
| ನಿವೇಶನಗಳ ಸಂಖ್ಯೆ | 217 |
| ಹಂಚಿಕೆಯಾಗಿರುವ ನಿವೇಶನ | 211 |
| ಕಾರ್ಯ ನಿರ್ವಹಿಸುತ್ತಿರುವ ಘಟಕಗಳು | 22 (21 ವೀವಿಂಗ್ + 1 ಗಾರ್ಮೆಂಟ್) |
| ಉದ್ಯೋಗ | 430 |
| | ಕಾರ್ಯ ನಿರ್ವಹಿಸುತ್ತಿದೆ. |

6. **ಕುರಣೆ ಟೆಕ್ಸ್ ಟೈಲ್ ಪಾರ್ಕ್ ಲಿ., – ಬೆಳಗಾವಿ**
(ರಾಜ್ಯ ಸರ್ಕಾರದ ಅನುಮೋದಿತ ನೂತನ ಜವಳಿ ನೀತಿ 2013-18)

| | |
|---|---|
| ಸ್ಥಳ | ಬುಗಟೆ ಗ್ರಾಮ, ಹುಕ್ಕೇರಿ ತಾ|| ಬೆಳಗಾವಿ ಜಿಲ್ಲೆ |
| ಎಸ್.ಪಿ.ವಿ | ಕುರಣೆ ಟೆಕ್ಸ್ ಟೈಲ್ ಪಾರ್ಕ್ ಲಿ., - ಬೆಳಗಾವಿ |
| ಭೂ ಪ್ರದೇಶ | 18.16 ಎಕರೆ |
| ಚಟುವಟಿಕೆ | ವೀವಿಂಗ್ |
| ನಿವೇಶನಗಳ ಸಂಖ್ಯೆ | 92 |
| ಹಂಚಿಕೆಯಾಗಿರುವ ನಿವೇಶನ | 67 |
| ಕಾರ್ಯ ನಿರ್ವಹಿಸುತ್ತಿರುವ ಘಟಕಗಳು | 02 |
| ಉದ್ಯೋಗ | 80 |
| ಸಂಸ್ಥೆಯ ವಂತಿಕೆ | ರೂ.2860.875 ಲಕ್ಷ |
| ಸರ್ಕಾರದ ವಂತಿಕೆ | ರೂ.1907.24 ಲಕ್ಷ |
| ಬಿಡುಗಡೆಯಾದ ಅನುದಾನ | ರೂ.286.00 ಲಕ್ಷ |
| | ಯೋಜನೆಯು ಅನುಷ್ಠಾನ ಹಂತದಲ್ಲಿದೆ. |

...4

7. ಬಳ್ಳಾರಿ ಟೆಕ್ಸ್ ಟೈಲ್ ಪಾರ್ಕ್ (ಕೆ.ಐ.ಎ.ಡಿ.ಬಿ ಅಭಿವೃದ್ಧಿಪಡಿಸಲಾದ)

| | |
|---|---|
| ಸ್ಥಳ | ಮುಂಡರಗಿ ಕೆ.ಐ.ಎ.ಡಿ.ಬಿ ಇಂಡಸ್ಟ್ರಿಯಲ್ ಏರಿಯ, ಬಳ್ಳಾರಿ ಜಿಲ್ಲೆ. |
| ಎಸ್.ಪಿ.ವಿ | ಇಲ್ಲ |
| ಭೂ ಪ್ರದೇಶ | 64.26 ಎಕರೆ |
| ಚಟುವಟಿಕೆ | ಜೀನ್ಸ್ ವಾಷಿಂಗ್ |
| ಒಟ್ಟು ಘಟಕಗಳ ಸಂಖ್ಯೆ | 83 |
| ಕಾರ್ಯ ನಿರ್ವಹಿಸುತ್ತಿರುವ ಘಟಕಗಳು | 67 |
| ಉದ್ಯೋಗ | 1550 |
| | ಕಾರ್ಯ ನಿರ್ವಹಿಸುತ್ತಿದೆ. |

ಜಂಟಿ ನಿರ್ದೇಶಕರು(ಜವಳಿ ನೀತಿ)
ಕೈಮಗ್ಗ ಮತ್ತು ಜವಳಿ

## ಅನುಬಂಧ-2

### 1. ಶಿಗ್ಗಾಂವಿ ಜವಳಿ ಪಾರ್ಕ್, ಶಿಗ್ಗಾಂವಿ, ಹಾವೇರಿ ಜಿಲ್ಲೆ:-

| | |
|---|---|
| ಸ್ಥಳ | ಸರ್ವೆ ನಂ.43, ಖುರ್ಸಾಪುರ ಗ್ರಾಮ, ಶಿಗ್ಗಾಂವಿ ತಾಲ್ಲೂಕು, ಹಾವೇರಿ ಜಿಲ್ಲೆ |
| ಎಸ್.ಪಿ.ವಿ | ಸರ್ಕಾರದ ಒಡೆತನ |
| ಭೂ ಪ್ರದೇಶ | 58 ಎಕರೆ 31 ಗುಂಟೆ |
| ಮೊದಲನೇ ಹಂತದ ಮೂಲಭೂತ ಸೌಕರ್ಯದ ಅಭಿವೃದ್ಧಿಗಾಗಿ ಅನುಮೋದನೆ ಮೊತ್ತ | ರೂ.25.00 ಕೋಟಿ |
| | ಯೋಜನೆಯು ಅನುಷ್ಠಾನ ಹಂತದಲ್ಲಿದೆ. |

### 2. ದೊಡ್ಡಬಳ್ಳಾಪುರ ಇಂಟಿಗ್ರೇಟೆಡ್ ಟೆಕ್ಸ್‌ಟೈಲ್ ಪಾರ್ಕ್ – ದೊಡ್ಡಬಳ್ಳಾಪುರ

(ಕೇಂದ್ರ ಸರ್ಕಾರದ ಅನುಮೋದಿತ SITP (Scheme for Integrated Textile Park)

| | |
|---|---|
| ಸ್ಥಳ | ಕೆ.ಐ.ಎ.ಡಿ.ಬಿ ಇಂಡಸ್ಟ್ರಿಯಲ್ ಏರಿಯ, 2ನೇ ಹಂತ, ದೊಡ್ಡಬಳ್ಳಾಪುರ, ಬೆಂಗಳೂರು[ಗ್ರಾ] |
| ಎಸ್.ಪಿ.ವಿ | ದೊಡ್ಡಬಳ್ಳಾಪುರ ಇಂಟಿಗ್ರೇಟೆಡ್ ಟೆಕ್ಸ್‌ಟೈಲ್ ಪಾರ್ಕ್ ಲಿ., - ದೊಡ್ಡಬಳ್ಳಾಪುರ |
| ಭೂ ಪ್ರದೇಶ | 46.5 ಎಕರೆ |
| ಚಟುವಟಿಕೆ | ವೀವಿಂಗ್, ಸೈಜಿಂಗ್, ವಾರ್ಪಿಂಗ್ & ಗಾರ್ಮೆಂಟಿಂಗ್ |
| ನಿವೇಶನಗಳ ಸಂಖ್ಯೆ | 86 |
| ಕಾರ್ಯ ನಿರ್ವಹಿಸುತ್ತಿರುವ ಘಟಕಗಳು | 14 |
| ಉದ್ಯೋಗ | 200 |
| ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಅನುದಾನ | ರೂ.3197.22 ಲಕ್ಷ |
| ರಾಜ್ಯ ಸರ್ಕಾರದಿಂದ ಬಿಡುಗಡೆಯಾದ ಅನುದಾನ | ರೂ.481.68 ಲಕ್ಷ |
| | ಕಾರ್ಯ ನಿರ್ವಹಿಸುತ್ತಿದೆ. |

...2

3. **ಬೈನರಿ ಅಪೇರೆಲ್ ಪಾರ್ಕ್ ಪ್ರೈ ಲಿ.,**
(ರಾಜ್ಯ ಸರ್ಕಾರದ ಅನುಮೋದಿತ ನೂತನ ಜವಳಿ ನೀತಿ 2013-18)

| | |
|---|---|
| ಸ್ಥಳ | ಬದನಕುಪ್ಪೆ ಗ್ರಾಮ, ಹಿರಿಯೂರು ತಾ\|\|, ಚಿತ್ರದುರ್ಗ ಜಿಲ್ಲೆ |
| ಎಸ್.ಪಿ.ವಿ | ಬೈನರಿ ಅಪೇರೆಲ್ ಪಾರ್ಕ್ ಪ್ರೈ. ಲಿ., ಹಿರಿಯೂರು |
| ಭೂ ಪ್ರದೇಶ | 25 ಎಕರೆ 17 ಗುಂಟೆ |
| ಚಟುವಟಿಕೆ | ಗಾರ್ಮೆಂಟಿಂಗ್ |
| ಕಾರ್ಯ ನಿರ್ವಹಿಸುತ್ತಿರುವ ಘಟಕಗಳು | 03 |
| ಉದ್ಯೋಗ | 3000 |
| ಮೊದಲನೇ ಹಂತದ ಯೋಜನಾ ವೆಚ್ಚ | ರೂ.2824.94 ಲಕ್ಷ |
| ಸರ್ಕಾರದ ವಂತಿಕೆ | ರೂ.1129.976 ಲಕ್ಷ |
| ಬಿಡುಗಡೆಯಾದ ಅನುದಾನ | ರೂ.1129.976 ಲಕ್ಷ |
| ಈ ಯೋಜನೆಯ ಮೊದಲನೇ ಹಂತ ಮುಕ್ತಾಯಗೊಂಡಿದ್ದು, 2ನೇ ಹಂತ ಪ್ರಗತಿಯಲ್ಲಿದೆ. | |
| 2ನೇ ಹಂತದ ಯೋಜನಾ ವೆಚ್ಚ | ರೂ.2126.72 ಲಕ್ಷ |
| ಸರ್ಕಾರದ ವಂತಿಕೆ | ರೂ.850.69 ಲಕ್ಷ |
| ಈವರೆಗೆ ಬಿಡುಗಡೆಯಾದ ಸಹಾಯಧನ | ರೂ.255.20 ಲಕ್ಷ |
| | ಕಾರ್ಯ ನಿರ್ವಹಿಸುತ್ತಿದೆ. |

4. **ದಾವಣಗೆರೆ ಟೆಕ್ಸ್ ಟೈಲ್ ಪಾರ್ಕ್ : (ಕೆ.ಐ.ಎ.ಡಿ.ಬಿ ಅಭಿವೃದ್ಧಿಪಡಿಸಲಾದ)**

| | |
|---|---|
| ಸ್ಥಳ | ಕರೂರು ಗ್ರಾಮ, ಕಸಬಾ ಹೋ\|\| ದಾವಣಗೆರೆ ತಾಲ್ಲೂಕು, ದಾವಣಗೆರೆ ಜಿಲ್ಲೆ |
| ಎಸ್.ಪಿ.ವಿ | ಇಲ್ಲ |
| ಭೂ ಪ್ರದೇಶ | 59 ಎಕರೆ |
| ಚಟುವಟಿಕೆ | ಸಿದ್ಧ ಉಡುಪು, ವೀವಿಂಗ್ ಘಟಕಗಳು, ಪ್ರಿಟಿಂಗ್, ಟೆಕ್ನಿಕಲ್ ಟೆಕ್ಸ್‌ಟೈಲ್ ಮತ್ತು ವಾಷಿಂಗ್ ಘಟಕಗಳು, |
| ನಿವೇಶನಗಳ ಸಂಖ್ಯೆ | 71 |
| ಹಂಚಿಕೆಯಾರಿರುವ ನಿವೇಶನ | 71 |
| ಕಾರ್ಯ ನಿರ್ವಹಿಸುತ್ತಿರುವ ಘಟಕಗಳು | 24 |
| ಉದ್ಯೋಗ | 1296 |
| | ಕಾರ್ಯ ನಿರ್ವಹಿಸುತ್ತಿದೆ. |